

## ಸುರಂಗದಲ್ಲಿ ಡೈವಿಂಗ್

ಸುರಂಗ ಡೈವಿಂಗ್ ಇತರೆ ಡೈವಿಂಗ್‌ಗಳಿಗಿಂತ ಕ್ಲಿಷ್ಟಕರ ಎನ್ನುತ್ತಾರೆ ಅನುಭವಿಗಳು. ಸುರಂಗದಲ್ಲಿ ಸಾಮಾನ್ಯವಾಗಿ ನೀರು ಚಹಾ/ಕಾಫಿ ಬಣ್ಣದಲ್ಲಿರುತ್ತದೆ. ಮುಳುಗಿ ಈಜುವವರಿಗೆ ಮುಂದಿನದೇನೂ ಕಾಣಿಸದು. ಸ್ವಾಭಾವಿಕ ಬೆಳಕು ಇಲ್ಲವೇ ಇಲ್ಲ. ಡೈವರ್ ತಲೆಗೆ ಹಾಕಿದ ಹ್ಯಾಟಿನಲ್ಲಿರುವ ಟಾರ್ಚ್ ಬೆಳಕು ನೀಡಬೇಕು. ಮುಖಕ್ಕೆ ಹಾಕಿದ ಮಾಸ್ಕ್ ಗುರುಗುರು ಶಬ್ದ ಹೊರಡಿಸುತ್ತಿರುತ್ತದೆ. ಅಲ್ಲಲ್ಲಿ ಗೋಡೆಯಿಂದ ಮುಂಚಾಚಿದ ಕಲ್ಲುಗಳು ಚೂಪಾಗಿ ಚುಚ್ಚುವಂತಿರುತ್ತವೆ. ಆಮ್ಲಜನಕದ ಸಿಲಿಂಡರ್ ಒಂದು ತಾಸು ಒಬ್ಬನನ್ನು ಕಾಪಾಡ ಬಲ್ಲದು. ತುಂಬ ದೂರದ ಪ್ರಯಾಣವಿದ್ದರೆ ಸಿಲಿಂಡರ್ ಬದಲಾಯಿಸುತ್ತಿರಬೇಕಾಗುತ್ತದೆ.

ಮತ್ತೂ ಕಷ್ಟದ ಕೆಲಸ ಎಂದರೆ, ಹೆಚ್ಚು ನೀರಿರುವಲ್ಲಿ ಮುಳುಗಿ ಈಜುವಾಗ ಜೊತೆಯಲ್ಲೇ ಮುಳುಗಿರುವ ಸಿಲಿಂಡರ್ ಭಾರವೆನಿಸುವುದಿಲ್ಲ, ಆದರೆ ಆಳವಿರದ ನೀರಿನಲ್ಲಿ ಅಥವಾ ಇಕ್ಕಟ್ಟು ದಾರಿಯಲ್ಲಿ ನುಸುಳಿ ದಾಟುವಾಗ ಅದೇ ಸಿಲಿಂಡರ್ ಅನ್ನು ಎತ್ತಿ ಹಿಡಿಯುವಾಗ ಯಮಭಾರವೆನಿಸುತ್ತದೆ. ಸುರಂಗ ಮಾರ್ಗ ಆಚೀಚೆ ದಿಕ್ಕು ಬದಲಿಸಿದಂತೆ ಸಿಲಿಂಡರ್ ಅನ್ನು ಅನುಕೂಲ ಸ್ಥಾನದಲ್ಲಿರಿಸಿಕೊಳ್ಳಬೇಕಾಗುತ್ತದೆ. ಹಾಗಾಗಿ ಸುರಂಗ ಮಥನಕ್ಕೆ ಹೊರಟ ಮುಳುಗುತಜ್ಞರು ಕಷ್ಟಸಹಿಷ್ಣುವಾಗಿಯೂ, ಕಟ್ಟುಮಸ್ತಾಗಿಯೂ ಇರಲೇಬೇಕಾಗುತ್ತದೆ.

ಹರಿಯುತ್ತಿರುವ ರಭಸದ ನೀರಿನಲ್ಲಿ ಮಕ್ಕಳಿಗಾಗಿ ಸತತ ಹುಡುಕಾಟ ನಡೆಸಿದರು. ಮಣ್ಣು ಕದಡಿದ ನೀರು, ಸುರಂಗದ ಆಚೀಚೆ ಕವಲುಗಳೊಡೆದ ಅಂಕುಡೊಂಕಾದ ಮಾರ್ಗದಲ್ಲಿ ಕೆಲವೆಡೆ ಮುಖ ಎತ್ತಲೂ ಆಗದೆ ನೀರಿನೊಳಕ್ಕೇ ಚಲಿಸುವ ಸ್ಥಿತಿ, ಕೆಲವೆಡೆ ಅತಿ ಇಕ್ಕಟ್ಟಾದ ಮಾರ್ಗ ಇವು ಈಜುಗಾರರ ಸಾಮರ್ಥ್ಯಕ್ಕೇ ಸವಾಲು ಒಡ್ಡಿದವು. ಮಕ್ಕಳ ಪತ್ತೆಗೆ ಪರ್ಯಾಯ ಮಾರ್ಗವನ್ನೂ ಯೋಚಿಸತೊಡಗಿದರು ಅಧಿಕಾರಿಗಳು. ಬೆಟ್ಟದ ಮೇಲುಭಾಗದಿಂದ ಗುಹೆಯ ಒಳಕ್ಕೆ ಸೀಳಿರುವ ಸ್ಥಳವನ್ನು ಹುಡುಕಿ ಆ ಮೂಲಕ ಚಿಮಣಿಯನ್ನು ಇಳಿಸಲು ಸಾಧ್ಯವೇ? ಆದರೆ ಭೋರ್ಗರೆಯುವ ಮಳೆಯಲ್ಲಿ ಎಲ್ಲೆಲ್ಲೆಂದು ಕೊರೆಯುವುದು?

ಪೋಷಕರ ಅಳಲು ಮೇರೆ ಮೀರಿತ್ತು. ಮಾಧ್ಯಮದವರ ಕೊನೆಯಿಲ್ಲದ ಪ್ರಶ್ನೆಗಳು ತಿವಿಯುತ್ತಿದ್ದವು. ದೇಶದ ಪ್ರಧಾನ ಮಂತ್ರಿ ಪ್ರಯೂತ್ ಚಾನ್ ಒಚಾ ಬಂದು ವಿಚಾರಿಸಿ ಹೋದರು. ರಕ್ಷಣಾ ಪಡೆ ಶೋಧ ಮುಂದುವರೆಸಿತ್ತು. ಆಸ್ಟ್ರೇಲಿಯಾ, ಬ್ರಿಟನ್ನಿನ ಮುಳುಗುತಜ್ಞರು ಸುರಂಗದ ವಿವಿಧ ಭಾಗಗಳನ್ನು ಜಾಲಾಡತೊಡಗಿದ್ದರು.

## ಕಣ್ಣಿಗೆ ಬಿದ್ದ ಹುಡುಗರು!

ಒಂಭತ್ತನೆಯ ದಿನ, ಹೀಗೇ ಈಜುತ್ತ, ಮುಳುಕು ಹಾಕುತ್ತ ಏಳುತ್ತ ಆಚೀಚೆ ದೃಷ್ಟಿಸುತ್ತ ಮುಂದೆ ಮುಂದೆ ಸಾಗಿದ ಬ್ರಿಟಿಷ್ ಈಜುಗಾರರ ಕಣ್ಣಿಗೆ ಬಿದ್ದಿದ್ದು ಮಣ್ಣಿನ ಏರು ದಿಬ್ಬದಲ್ಲಿ ಕುಳಿತಿದ್ದ ಹದಿಮೂರೂ ಫುಟ್‌ಬಾಲ್ ಆಟಗಾರರು! ಅದೂ ಗುಹೆಯ ದ್ವಾರದಿಂದ ಸುಮಾರು ನಾಲ್ಕು ಕಿ.ಮೀ ಆಚೆ. ಶೀಘ್ರವಾಗಿ ರಕ್ಷಿಸುತ್ತೇವೆ ಎಂದವರಿಗೆ ಭರವಸೆ ನೀಡಿ ರಿಚರ್ಡ್, ಜಾನ್ ವಾಪಸ್ಸಾದರು.

ಬಾಲಕರ ಪತ್ತೆ ಹಚ್ಚಿದ್ದೇ ತಡ, ರಕ್ಷಣಾ ಪಡೆ ಅವರನ್ನು ಸುರಂಗದ ಜಲ ಪ್ರವಾಹದಿಂದ ಹೊರ ತರುವ ಬಗ್ಗೆ ತಜ್ಞರ ಜೊತೆಗೂಡಿ ಸಮಾಲೋಚನೆ ನಡೆಸತೊಡಗಿತು. ಅದೇ ವೇಳೆಗೆ ಮಕ್ಕಳ ಬಳಿ ಆಗಾಗ ರಕ್ಷಣಾ ತಂಡದ ತಜ್ಞರು ಹೋಗಿ ಬರತೊಡಗಿದರು. ಅವರಿಗೆ ಸುಲಭವಾಗಿ ಜೀರ್ಣವಾಗುವ ಆಹಾರ, ಮಾತ್ರೆಗಳು ಪೂರೈಕೆಯಾಗತೊಡಗಿದವು. ಈಜುಗಾರರು ವಾಪಸ್ಸು ಬರುವಾಗ ಮಕ್ಕಳು ಬರೆದ ಪತ್ರಗಳು ಬಂದವು. ಕಾಯುತ್ತಿದ್ದ ಅಪ್ಪ ಅಮ್ಮಂದಿರ ಕಣ್ಣಲ್ಲಿ ಆನಂದಭಾಷ್ಪ! ಒಬ್ಬ ಮನೆಗೆ ಮರಳಿದ ಕೂಡಲೇ ತನಗೇನು ತಿಂಡಿ ಬೇಕೆಂದು ಬರೆದರೆ, ಇನ್ನೊಬ್ಬ ಶಾಲೆಯ ಟೀಚರಿಗೆ ಹೆಚ್ಚು ಹೋಂ ವರ್ಕ್ ಕೊಡದಿರಲು ಹೇಳಿ ಎಂದಿದ್ದ! ಮತ್ತೊಬ್ಬ 'ಚಿಂತೆ ಮಾಡಬೇಡಿ, ನಾವೆಲ್ಲರೂ ಬಹಳ strong' ಎಂದು ಪೌರುಷ ತೋರಿದ್ದ. ತಂಡದ ಕೋಚ್ 'ತಪ್ಪಾಯಿತು ಕ್ಷಮಿಸಿಬಿಡಿ' ಎಂದು ಕೇಳಿಕೊಂಡಿದ್ದ.

ಬಾಲಕರನ್ನು ಸುರಕ್ಷಿತವಾಗಿ ಹೊರತರುವುದು ಹೇಗೆ ಎಂಬ ಬಗ್ಗೆ ಎಲ್ಲೆಡೆಯೂ ಚರ್ಚೆ. ಒಂದಿಬ್ಬರ ಹೊರತು ಉಳಿದವರಿಗೆ ಸಾಮಾನ್ಯ ಈಜು ಕೂಡ ಗೊತ್ತಿಲ್ಲ, ಅಂಥವರಿಗೆ ಬೆನ್ನಿಗೆ ಆಕ್ಸಿಜನ್ ಸಿಲಿಂಡರ್ ಕಟ್ಟಿ ಮುಳುಗು ಹಾಕಿಸುತ್ತ ಕರೆತರುವುದೇ? ಮಾರ್ಗ ಮಧ್ಯದ ಇಕ್ಕಟ್ಟು ಸಂದಿಯಲ್ಲಿ, ಕತ್ತಲೆಯಲ್ಲಿ ಅದು ಸಾಧ್ಯವಾದೀತೇ? ಮಳೆಯ ಆರ್ಭಟ, ಅದರಿಂದಾದ